ಬೋರ್‌ವೆಲ್ ಹಾಕಬಹುದು. ಸೋರ್ಸಸ್ ಇದೆ, ಎಂ.ಪಿ. ಗ್ರಾಂಟ್ ಇಲ್ಲವೇ? ಇದೆ; ಆಯಿತು, ಇವುಗಳನ್ನು ಬಿಟ್ಟುಬಿಡೋಣ. ಅಲ್ಲಿ ಬೋರ್ ಹಾಕಿಸಿಕೊಡುವ ಕೆಲಸ ಇದೆ, ಅದನ್ನು ಹಾಕಿಕೊಡೋಣ.

ಸುಳ್ಯ ಸಮುದಾಯ ಆಸ್ಪತ್ರೆಯ ಅಭಿವೃದ್ಧಿಗೆ ಒದಗಿಸಲಾದ ಅನುದಾನ ಹಾಗೂ ಕಾಮಗಾರಿಗೆ ಆಗಿರುವ ವೆಚ್ಚ

247 (2050) ಶ್ರೀ ಅಂಗಾರ ಎಸ್. (ಸುಳ್ಯ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಳ್ಯ ಸಮುದಾಯ ಆಸ್ಪತ್ರೆಗೆ (ಕರ್ನಾಟಕ ಹೆಲ್ತ್ ಡೆವಲಪ್‌ಮೆಂಟ್) ಕರ್ನಾಟಕ ಆರೋಗ್ಯ ಅಭಿವೃದ್ಧಿ ಸ್ಕೀಮ್ ಯೋಜನೆಯಡಿಯಲ್ಲಿ ಆಸ್ಪತ್ರೆಯ ಅಭಿವೃದ್ಧಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ; (ಯಾವ ಯಾವ ಯೋಜನೆಗೆ ಎಷ್ಟು ಖರ್ಚು ಮಾಡಲಾಗಿದೆ ಎಂಬ ವಿವರ ನೀಡುವುದು);

ಆ) ಇನ್ನು ಕಾಮಗಾರಿಗಳು ಪೂರ್ತಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಎಷ್ಟು ಸಮಯದಲ್ಲಿ ಪೂರ್ತಿ ಮಾಡಲಾಗುವುದು?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸುಳ್ಯದ ಸಮುದಾಯ ಆಸ್ಪತ್ರೆಯನ್ನು ಹಾಲಿ 30 ಹಾಸಿಗೆಗಳಿಂದ 50 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಕೈಗೊಂಡಿದ್ದು ಒಟ್ಟು ರೂ. 106.71 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ. ಕಾಮಗಾರಿಗೆ ಆಗಿರುವ ವೆಚ್ಚ ಕೆಳಕಂಡಂತೆ ಇದೆ.

	(ಲಕ್ಷಗಳಲ್ಲಿ)
1. ಆಸ್ಪತ್ರೆ ವಿಸ್ತರಣೆ ಮತ್ತು ನವೀಕರಣ ಕಾಮಗಾರಿ	- ರೂ. 91.77
2. ಗ್ಲೇಜ್ ಟೈಲ್ಸ್ ಒದಗಿಸಿರುವುದು	- ರೂ. 11.50
3. ಕಸವಿಲೇವಾರಿ ಗುಂಡಿಗಳ ನಿರ್ಮಾಣ	- ರೂ. 0.81
4. ಗುಣಮಟ್ಟ ಸಂಸ್ಥೆಗೆ ಪಾವತಿಸಲಾದ ಮೊತ್ತ ಹಾಗೂ ಇತರೆ	- ರೂ. 1.20
5. ವಿದ್ಯುತ್ ಸರಬರಾಜಿಗಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಪಾವತಿಸಲಾದ ಮೊತ್ತ	- ರೂ. 1.43

ಆ) ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳನ್ನು 31.10.2000 ರ ದೊಳಗೆ ಪೂರ್ಣಗೊಳಿಸಲಾಗಿದೆ. ಇತ್ತೀಚೆಗೆ ಆಸ್ಪತ್ರೆಯ ಹಳೆಯ ಕಟ್ಟಡದ ವಿದ್ಯುತ್ ವೈಯರಿಂಗ್‌ನಲ್ಲಿಯ ದೋಷ ಮತ್ತು ಮಂಗಳೂರು ಹಂಚಿನ ಛಾವಣಿ ಸೋರುವಿಕೆಯ ಬಗ್ಗೆ ವರದಿ ಬಂದಿದ್ದು, ಇವುಗಳನ್ನು ಸರಿಪಡಿಸಲು ರೂ. 8.00 ಲಕ್ಷಗಳ ಅಂದಾಜು ತಯಾರಿಸಲಾಗಿದೆ. ನಿರ್ವಹಣಾ ಅನುದಾನದಿಂದ ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್. ಅಂಗಾರ :- ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಸುಳ್ಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮತ್ತು ಅದರ ಅಭಿವೃದ್ಧಿಗಾಗಿ ಯಾವ ಯೋಜನೆಯಡಿ ಅನುದಾನವನ್ನು ಒದಗಿಸಿಕೊಡಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಕರ್ನಾಟಕ ಆರೋಗ್ಯ ಅಭಿವೃದ್ಧಿ ಸ್ಕೀಮಿನ ಅಡಿಯಲ್ಲಿ ಅನುದಾನವನ್ನು ಒದಗಿಸಿಕೊಡಲಾಗಿದೆ ಎಂಬ

ಉತ್ತರವನ್ನು ಅವರು ಕೊಟ್ಟಿರುತ್ತಾರೆ. ಈ ಯೋಜನೆಯ ಅಡಿಯಲ್ಲಿ ಕಾಮಗಾರಿಗಳು ಪೂರ್ತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದಾಗ, ಈ ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳನ್ನು 31-10-2000 ರೊಳಗೆ ಪೂರ್ಣಗೊಳಿಸಲಾಗಿದೆ; ಇತ್ತೀಚೆಗೆ ಆಸ್ಪತ್ರೆಯ ಹಳೆಯ ಕಟ್ಟಡದ ವಿದ್ಯುತ್ ವೈಯರಿಂಗ್‌ನಲ್ಲಿ ದೋಷ ಮತ್ತು ಮಂಗಳೂರು ಹೆಂಚಿನ ಛಾವಣಿ ಸೋರುವಿಕೆಯ ಬಗ್ಗೆ ವರದಿ ಬಂದಿದ್ದು, ಇವುಗಳನ್ನು ಸರಿಪಡಿಸಲು 8.00 ಲಕ್ಷ ರೂಪಾಯಿಗಳ ಅಂದಾಜು ತಯಾರಿಸಲಾಗಿದೆ; ನಿರ್ವಹಣಾ ಅನುದಾನದಿಂದ ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂಬ ಮಾತನ್ನು ಹೇಳಿದ್ದಾರೆ. ಈ ಉತ್ತರ ಸಂಪೂರ್ಣ ಸತ್ಯಾಂಶಕ್ಕೆ ದೂರವಾದ ಉತ್ತರ. ಹಳೆಯ ಆಸ್ಪತ್ರೆ ಕಟ್ಟಡವೇನಿದೆ, ಅದಕ್ಕೆ ವೈರಿಂಗ್ ಕೂಡ ಆಗಲಿಲ್ಲ. 6 ತಿಂಗಳ ಹಿಂದೆ ಷಾರ್ಟ್ ಸರ್ಕೀಟ್ ಆಗಿ ಸ್ವಲ್ಪ ತೊಂದರೆ ಕೂಡ ಆಗಿದೆ. ಈ ಬಗ್ಗೆ ಆಸ್ಪತ್ರೆಯ ಸಂದರ್ಶನ ಸಮಿತಿಯಿಂದ ಕೂಡ, ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇವೆ. ಆದರೂ ಕೂಡ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಅದೇ ರೀತಿಯಲ್ಲಿ, ಹೆರಿಗೆಯ ವಿಭಾಗ ಏನಿದೆ, ಅದೂ ಕೂಡ ಈಗ ಸೋರುತ್ತಾ ಉಂಟು, ಯಾವುದೇ ಕೆಲಸಗಳಾಗಲಿಲ್ಲ. ಇಲ್ಲಿ ಕೊಟ್ಟಂಥ ಮಾಹಿತಿಯಲ್ಲಿ, ಯೋಜನೆಯಡಿಯಲ್ಲಿ ಏನು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದೇವೆ, ಅದನ್ನು ಪೂರ್ಣಗೊಳಿಸಲಾಗಿದೆ ಎಂಬು ಮಾಹಿತಿಯನ್ನು ಕೊಟ್ಟಿದ್ದಾರೆ. ಇಲ್ಲಿ ಕೊಟ್ಟಿರತಕ್ಕಂಥ ಈ ಮಾಹಿತಿ ಸತ್ಯಕ್ಕೆ ದೂರವಾಗಿರತಕ್ಕಂಥಾದ್ದು. ಮಾನ್ಯ ಸಚಿವರು, ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಗೆ ಕೇಳಿ ಅವರು ಸ್ಪಷ್ಟವಾಗಿ ಉತ್ತರ ಕೊಡುತ್ತಾರೆ. ಆದರೆ, ಇಲ್ಲಿ ಕೊಟ್ಟಿರತಕ್ಕ ಮಾಹಿತಿ ತಪ್ಪಾಗಿದೆ. ಇದಕ್ಕೆ ಸ್ಪಷ್ಟ ಉತ್ತರ ಹೇಳಬೇಕು.

ಅಧ್ಯಕ್ಷರು :- ಇಲ್ಲಿ ಕೊಟ್ಟಿರತಕ್ಕಂಥ ಮಾಹಿತಿ ಸತ್ಯಕ್ಕೆ ದೂರವಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ನಾವು ಕೊಟ್ಟಿರತಕ್ಕ ಮಾಹಿತಿ ಸರಿಯಾಗಿದೆ. ಅವರು ತಿಳಿದುಕೊಂಡಿರತಕ್ಕಂಥಾದ್ದು ಸರಿಯಾಗಿಲ್ಲ. ನಾವು ಹೊಸದಾಗಿ ಏನೇನು ಕೆಲಸಗಳನ್ನು ಮಾಡಿದ್ದೇವೆಂದು ಹೇಳಲಾಗಿದೆ. ಆದರಲ್ಲಿ ಏನಾದರೂ ವ್ಯತ್ಯಾಸಗಳಿದ್ದಲ್ಲಿ, ಅದನ್ನೂ ಮಾಡೋಣ. ಆದರೆ, ಅದು ಸುಳ್ಳಾಗಿದೆ ಎಂದು ಹೇಳಿದರೆ, ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ, 106 ಲಕ್ಷ ರೂಪಾಯಿಗಳಷ್ಟು ಹಣ ಖರ್ಚಾಗಿದೆ. ಇದರಲ್ಲಿ ಹೊಸದಾಗಿ ಮಾಡಿರತಕ್ಕ ಕಾಮಗಾರಿಗಳು 12 ಹಾಸಿಗೆಗಳು ಕೊಠಡಿ ವಾರ್ಡ್ ಬ್ಲಾಕ್, 22 ಹಾಸಿಗೆಗಳ ಕೊಠಡಿ ವಾರ್ಡ್ ಬ್ಲಾಕ್, ಶಸ್ತ್ರಚಿಕಿತ್ಸಾ ಕೊಠಡಿ, ವಿದ್ಯುತ್ ಜನರೇಟರ್ ಕೊಠಡಿ, ವಾಹನ ನಿಲುಗಡೆ ಸ್ಥಳ, ವಿದ್ಯುತ್ ಪವರ್ ಕೊಠಡಿ, ರ್‍ಯಾಂಪ್ಸ್ ನಿರ್ಮಾಣ ಮತ್ತು ನೀರಿನ ಟ್ಯಾಂಕ್ ಮತ್ತು ನವೀಕರಿಸಿದ ಕಾಮಗಾರಿಗಳು, 12 ಹಾಸಿಗೆಗಳ ಕೊಠಡಿ, ಪ್ರಸೂತಿ ಕೊಠಡಿ, ಪಾಕಶಾಲೆ, ಪ್ರಯೋಗಾಲಯ, ಆಡಳಿತ ಕಛೇರಿ, ಎಲ್ಲಾ ಶೌಚಾಲಯ, ವಿಕಿರಣ ರೇಡಿಯಾಲಜಿ ಇತ್ಯಾದಿ ಕಾಮಗಾರಿಗಳನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಹಳೆಯ ಒಂದು ಕಟ್ಟಡ ಇದೆ. ಅದು ಹೆಂಚಿನ ಮನೆ; ಅದರಲ್ಲಿ ವೈರಿಂಗ್ ವಗೈರೆ ಹೋಗಿದೆ. ಹಳೆಯ ಹೆಂಚಿನ ಮನೆ ಭಾಗ ಏನಿದೆ ಇದು ಕೆ.ಹೆಚ್.ಎಸ್.ಡಿ.ಪಿ. ಕಾರ್ಯಕ್ರಮದಲ್ಲಿ ಸೇರಿಲ್ಲ. ಅದಕ್ಕೆ ಪ್ರತ್ಯೇಕವಾಗಿ 8 ಲಕ್ಷ ರೂಪಾಯಿಗಳ ಅಂದಾಜು ಮಾಡಿದೆ. ಅದನ್ನು ನಾವು ಕಾರ್ಯಗತ ಮಾಡುತ್ತೇವೆ.

ಶ್ರೀ ಎಸ್. ಅಂಗಾರ :- ಮಾನ್ಯ ಮಂತ್ರಿಗಳು ಹೇಳಿದಂತೆ ಯಾವ ಮಾಹಿತಿ ಸರಿ ಇದೆ ಎಂಬುದು ಸ್ಪಷ್ಟವಾಗಬೇಕು. ಇಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ಅಲ್ಲಿ 15 ಕೆ.ವಿ. ಜನರೇಟರ್ ತಂದಿದ್ದಾರೆ. ಇಷ್ಟರವರೆಗೆ ಜೋಡಣೆ ಆಗಲಿಲ್ಲ. ಇದೂ ಕೂಡ ಈ ಅಭಿವೃದ್ಧಿ ಕೆಲಸಗಳಲ್ಲಿ ಸೇರ್ಪಡೆಯಾಗಿರುವಂಥಾದ್ದು. ಆಪರೇಷನ್ ಥಿಯೇಟರ್‌ಗೆ ಸಂಬಂಧಪಟ್ಟ ಹಾಗೆ ಎ.ಸಿ. ಕೂಡ; ಒಂದು ಎ.ಸಿ. ಮಾತ್ರ ಅಳವಡಿಕೆಯಾಗಿದೆ. ಇನ್ನೊಂದು ಎ.ಸಿ. ಬರಲಿಲ್ಲ. ಈ ರೀತಿಯಲ್ಲಿ ಅನೇಕ ಕಾಮಗಾರಿಗಳು ನಡೆದು, ಅರ್ಧದಲ್ಲಿ ನಿಂತಿವೆ. ನಿಮಗೆ ಅಲ್ಲಿ ಏನು ಸೌಲಭ್ಯವಿದೆ, ಆ ಮಾಹಿತಿಯನ್ನು ಮಾತ್ರ ಅಧಿಕಾರಿಗಳು ಕೊಟ್ಟಿದ್ದಾರೆ. ತಾವು ದಯವಿಟ್ಟು ಇವತ್ತೇ ಸಂಬಂಧಪಟ್ಟಂತಹ ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ವಿಚಾರಿಸಿ. ನಾವು ಎಷ್ಟೋ ಸಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇವೆ, ವಿನಂತಿಯನ್ನು ಮಾಡಿಕೊಂಡಿದ್ದೇವೆ. ಎಷ್ಟು ಬಾರಿ ಕೇಳಿಕೊಂಡರೂ ಕೂಡ, ಆ ಯೋಜನೆಗಳಿಗೆ ಇರತಕ್ಕ ಸೌಲಭ್ಯವನ್ನು ಸರಿಪಡಿಸುವ ಕೆಲಸಗಳಾಗಲಿಲ್ಲ. ಆದಷ್ಟು ಬೇಗನೆ ತಾವು ಸರಿಪಡಿಸತಕ್ಕ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ನಾವು ಪೂರ್ಣ ಮಾಡಿರತಕ್ಕ ಕೆಲಸಗಳಲ್ಲಿ, ಪೂರ್ಣ ಆಗದೇ ಹೋಗಿದ್ದರೆ, ಅದಕ್ಕೆ ಯಾರು ಸಂಬಂಧಪಟ್ಟವರು, ಏಕೆ ಈ ವರದಿ ಕೊಟ್ಟಿದ್ದಾರೆಂಬುದನ್ನು ಕೇಳಿ, ಖಂಡಿತ ಅದನ್ನು ಸರಿ ಮಾಡುತ್ತೇನೆ. ನನಗೆ ಬಂದಂಥ ವರದಿ ಪ್ರಕಾರ, ಪೂರ್ಣವಾಗಿ ಅದನ್ನು ಕೊಟ್ಟಿದ್ದೇವೆ. ಅವರು ಹೇಳಿದಂಥ ವಿಷಯವನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟವರನ್ನು ಕರೆಸಿ, ಬೇಕಾದರೆ ಅವರನ್ನೂ ಬರಮಾಡಿಕೊಂಡು ಸರಿಪಡಿಸುತ್ತೇನೆ. ಮತ್ತೆ ಲೋಪವಾಗಿದ್ದರೆ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ: 248 (2102)

ಅಧ್ಯಕ್ಷರು :- ಮಾನ್ಯ ಸಭಾಪತಿಯವರು ಮಧ್ಯಾಹ್ನ 3 ಗಂಟೆಗೆ ಬಂದು ನನ್ನನ್ನು ಮೀಟ್ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ಅವರ ರಾಜೀನಾಮೆ ವಿಷಯ ಕೇಳಿ ಬಹಳ ದಿವಸಗಳಾಯಿತು; ಅದೇನಾಯಿತು ಎಂಬುದನ್ನು ನಾವು ಕೇಳುತ್ತೇವೆ. ಈ ಪ್ರಶ್ನೆಯೂ ಕೂಡ ಉಡುಪಿ ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು :- ಅವರು ರಾತ್ರಿ ನನಗೆ ಫೋನ್ ಮಾಡಿ, ನಾಳೆ ಮಧ್ಯಾಹ್ನ 3 ಗಂಟೆಗೆ ಬಂದು ನೋಡುತ್ತೇನೆ, ಪ್ಲೇನ್‌ನಲ್ಲಿ ಮಂಗಳೂರಿನಿಂದ ಬರುತ್ತೇನೆಂದು ಹೇಳಿದ್ದಾರೆ. ಅವರು ಬಂದು, ಏನು ಹೇಳುತ್ತಾರೆಂದು ನೋಡಿಕೊಂಡು, I can give my judgement ಇನ್ನು ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಂದ್ರಪ್ಪ :- ಮಾನ್ಯ ಸಭಾಪತಿಯವರ ವಿಚಾರದಲ್ಲಿ ತಾವು 10 ದಿವಸದೊಳಗೆ ತೀರ್ಮಾನ ತೆಗೆದುಕೊಳ್ಳಬೇಕಲ್ಲಾ. ಈಗಾಗಲೇ 15 ದಿವಸಗಳಾಯಿತು, ಅದಕ್ಕಾಗಿ ತಮ್ಮನ್ನು ಕೇಳಿದ್ದು.

ಅಧ್ಯಕ್ಷರು :- ಅವರು ಬಂದ ಮೇಲೆ ಕೇಳುತ್ತೇನೆ. ಅವರೇನು ಕೋಪದಲ್ಲಿ ಕೊಟ್ಟಿದ್ದಾರೆಯೇ ಏನು? ಯಾರದ್ದಾದರೂ ಬಲವಂತ ಇದೆಯೇ ಎಂಬುದನ್ನು ಕೇಳಬೇಕಲ್ಲಾ. It is my duty.